


ಎಡದಿಂದ ಬಲಕ್ಕೆ
1. ಅಜ್ಜನ ಈ ಹೊಸ ವರ್ತನೆ ಅಸ್ವಾಭಾವಿಕ ಎನಿಸುತ್ತದೆ (4)
3. ಗುರಾಣಿಯ ಮೇಲೆಲ್ಲ ಜಾಡ್ಯ ಹಬ್ಬುವ ಸೂಕ್ಷ್ಮ ಜೀವಿ (3)
4. ಈ ಶುಂಠಿ ಚೂರಲ್ಲಿ ನೋಡಿ ಎಷ್ಟೊಂದು ಕವಲು (3)
6. ಗೊತ್ತೇ ಇಲ್ಲದಂತೆ ಕಳೆದುಹೋದ ಸಮಯ (4)
7. ಆನೆಯನ್ನು ಪಳಗಿಸಲು ಸ್ನೇಹಮಯ ಕ್ರಮ ಬೇಕು (4)
9. ಸಂಚಕಾರ ತಂದ ಮನೋಭಾವ ವಿಶಾಲವಾದದ್ದಲ್ಲ (4)
11. ಎಲ್ಲರನ್ನೂ ಮೂರ್ಖರನ್ನಾಗಿಸಿದಂಥ ಕೈಚಳಕ (4)
13. ಹೆದರಿ ಹಾದಿಯಲ್ಲೇ ಇರುವಿರೇಕೆ ? ಅನುಮತಿ ಪತ್ರ ಇದೆ ತಾನೇ ? (4)
15. ಆನಂದಕರವಾಗಿದ್ದ ವೇಳೆಯಲ್ಲಿ ಇದ್ದಕ್ಕಿದ್ದಂತೆ ಕತ್ತಲು (4)
17. ಸರಾಗವಾದದ್ದೇನಲ್ಲ ; ಇದು ನೆಲ ಕೊರೆದ ಹಾದಿ (3)
18. ಈ ಸಣ್ಣ ಇರುವೆಗಳದು ಎಂಥ ಸಾಲು ನೋಡಿ(3)
19. ಮರೆತೆನೆಂದರೆ ಹೇಗೆ ? ಅದು ಪಕ್ಕದ್ದೇ ನಿವಾಸ (4)

ಮೇಲಿಂದ ಕೆಳಕ್ಕೆ
1. ಅಣ್ಣನಿಗೆ ಅತ್ಯಂತ ಪ್ರಿಯನಾದ ಮಗ ಈತ (3)
2. ಹೀಗೆ ಜುಟ್ಟು ಕಟ್ಟುವ ಕೆಲಸ ಸುಲಭವಲ್ಲ (3)
3. ದುರಾತ್ಮನ ಕಾಟದಿಂದಾಗಿ ಸದಾ ಅಳು (3)
5. ರೈತರಿಗೆ ಕೊಡಲು ತಂದಿದ್ದ ಸಾಧನವೇ ಹಿಂದುಮುಂದು (3)
7. ಅಕ್ಕಮ್ಮ ಅಪರಾಧ ಮಾಡಿದ್ದಾನೆ, ಆದರೆ ಮುಗ್ಧ (4)
8. ಕಷಾಯ ತಿರುವಿದ ದೇವತೆಯ ಯಜಮಾನ ಕುಬೇರ ತಾನೇ ? (4)
9. ಸಂತರ ಉತ್ಸವ ನಡೆದದ್ದು ಎಂತಹ ವರ್ಷ ? (4)
10. ತುರ್ತು ಪರಿಸ್ಥಿತಿಯಲ್ಲಿ ಪ್ರತಿ ಕೆಲಸದಲ್ಲೂ ಆತುರ (4)
12. ಸುಮ್ಮನಿರು ಎಂದು ಅರಚಿದ್ದನ್ನು ಕ್ಷಮಿಸಿಬಿಡು (3)
14. ಹಣ್ಣಿನ ತೋಟಕ್ಕೆ ಹಾರಿ ಬಂದದ್ದು ಜಿಂಕೆ (3)
15. ಅಂಗರಾಗದ ಬಳಕೆಯನ್ನೇ ತ್ಯಜಿಸಿದ್ದಾಳೆ ಆ ಮಹಿಳೆ (3)
16. ತಟ್ಟೆಯ ಮೊಸರನ್ನೆಲ್ಲ ಸೇವಿಸಲು ನಾಲಿಗೆಯೇ ಸರಿ? (3)

## 20.12.2018ರ ಸರಿ ಉತ್ತರಗಳು

ಎಡದಿಂದ ಬಲಕ್ಕೆ
1. ಪರಿತಾಪ 3. ಸಂವಾದ 4. ಗಾವಿಲ 6. ಕಲಾಕಾರ 7.ಮನವಿ 9. ಕಂಟಕ 11.ಕಥನ 13. ಕರಾಳ 15. ಆಪದ್ದನ 17. ಕುರುಹು 18. ಕಾರಣ 19. ತಿರಸ್ಕಾರ

ಮೇಲಿಂದ ಕೆಳಕ್ಕೆ
1. ಪದಕ 2. ಪಗಾರ 3. ಸಂಧಾನ 5. ಲಲಾಟ 7. ಮಸ್ತಕ 8. ವಿಧಾನ 9. ಕಂದುಕ 10. ಕವಳ 12. ಥಳಕು 14.ರಾವಣ 15.ಆಹುತಿ 16.ನಕಾರ

ಪ್ರಶ್ನಾಂಕಣ

# ಕಡಲ ಕುದುರೆ: ಅದೆಂಥ ಪ್ರಾಣಿ?

ಅದೆಂಥ ಪ್ರಾಣಿಯೇ ಆಗಿರಲಿ, ಒಂದಂಶ ಸ್ಪಷ್ಟವಾಗಿರಲಿ: ನೆಲವಾಸಿ ಪ್ರಾಣಿಯಾದ ಕುದುರೆಗೂ ಕಡಲ ಕುದುರೆಗೂ ಯಾವ ಸಂಬಂಧವೂ ಇಲ್ಲ. ಕುದುರೆಯನ್ನೇ ಹೋಲುವ ಕತ್ತು, ತಲೆ ಹಾಗೂ ಕಡಲಲ್ಲಿ ವಾಸ ಈ ಲಕ್ಷಣಗಳಿಂದಾಗಿ ಈ ಜೀವಿಗೆ ಕಡಲ ಕುದುರೆ ಎಂಬ ರೂಪಾನ್ವಯ ಹೆಸರು (ಚಿತ್ರಗಳಲ್ಲಿ ಗಮನಿಸಿ) ಅಷ್ಟೆ.

ವಾಸ್ತವವಾಗಿ ಕಡಲ ಕುದುರೆ ಒಂದು ಬಗೆಯ ಮೀನು. ಅಂದಾಜು 45 ಪ್ರಭೇದಗಳಿರುವ ಈ ಮತ್ಸ್ಯಗಳ ವೈಚಿತ್ರ್ಯಗಳು ಇನ್ನೂ ಹಲವಾರು. ಉಂಗುರಾಕಾರದ ಎಲುಬುಗಳನ್ನು ಜೋಡಿಸಿ ಅವುಗಳ ಮೇಲೆ ಚರ್ಮವನ್ನು ಎಳೆದು ಹೊದಿಸಿದಂತೆ ಕಾಣುವ ಶರೀರ.

ಕುಬ್ಜ ಗಾತ್ರದ, ಅರ್ಧ ಅಂಗುಲದಿಂದ ಹದಿನಾಲ್ಕು ಅಂಗುಲಗಳವರೆಗೆ ವಿವಿಧ ಉದ್ದಗಳ ದೇಹ. ನೇರ ನಿಂತಂತೆಯೇ ಇರುವ ಭಂಗಿ. ಅದೇ ಭಂಗಿಯಲ್ಲೇ ಅತ್ಯಂತ ಮಂದ ವೇಗದ ತಾಸಿಗೆ ಐದು ಅಡಿ ದೂರ ಮೀರದ ಈಜಾಟ! ತುದಿಯಲ್ಲಿ ಸುತ್ತಿ ಭದ್ರವಾಗಿ ಹಿಡಿಯಬಲ್ಲ ಉದ್ದವಾದ ಬಾಲ. ಹೇಗೆಂದರೆ ಹಾಗೆ ಬಾಗಬಲ್ಲ ಕತ್ತು. ಶಿರದ ಮೇಲೊಂದು ಕೊಂಬಿನಂಥ ಕಿರೀಟ. ಗೋಸುಂಬೆಯಂತೆ ಸ್ವತಂತ್ರವಾಗಿ ತಿರುಗಬಲ್ಲ, ಭಿನ್ನ ದೃಶ್ಯಗಳನ್ನು ಕಾಣಬಲ್ಲ ಕಣ್ಣುಗಳು. ಬೆಚ್ಚನ್ನ ಜಲದ ಸಾಗರ ಪ್ರದೇಶಗಳಲ್ಲಿನ ಕಡಲ ಕಳೆಗಳ ಅಡವಿಗಳಲ್ಲಿ ಅಥವಾ ಹವಳ ಲೋಕಗಳಲ್ಲಿ ವಾಸ. ಅಂಥ ನೆಲೆಗಳಲ್ಲಿ ನೀರೊಳಗಿನ ಭದ್ರ ವಸ್ತುವೊಂದಕ್ಕೆ ಬಾಲದ ತುದಿಯನ್ನು ಸುತ್ತಿ ಹಿಡಿದು ಉಳಿಯುವುದು ಅವುಗಳ ಕ್ರಮ (ಚಿತ್ರ 1, 2). ಹಾಗೇ ಉಳಿದು, ಅಲ್ಲಿಗೇ ತೇಲಿ ಬರುವ ಪುಟ್ಟ ಜೀವಿಗಳನ್ನು ಹೀರಿಕೊಂಡು ನುಂಗುವುದು ಈ ಪ್ರಾಣಿಗಳ ಆಹಾರ ಸೇವನಾ ವಿಧಾನ. ಈ ಜೀವಿಗಳ ಸಂತಾನ ಕ್ರಮ ಮತ್ತೊಂದು ಸೋಜಿಗ. ಸಂತಾನ ಕಾಲದಲ್ಲಿ ಹೆಣ್ಣು ಕಡಲ ಕುದುರೆ ತನಗೊಪ್ಪುವ ಗಂಡೊಂದನ್ನು ಹುಡುಕಿ ಅದರ ಹೊಟ್ಟೆ ಮೇಲಿನ ವಿಶೇಷ ಚೀಲದೊಳಕ್ಕೆ ಮೊಟ್ಟೆಗಳನ್ನು ಸುರಿಯುತ್ತದೆ. ಗಂಡು ಆ ತತ್ತಿಗಳನ್ನೆಲ್ಲ ಫಲವಂತಗೊಳಿಸಿ, ಚೀಲದಲ್ಲೇ ಉಳಿಸಿಟ್ಟುಕೊಂಡು ಮರಿಗಳು ಹೊರ ಬರುವವರೆಗೂ ರಕ್ಷಿಸುತ್ತದೆ (ಚಿತ್ರ3). ಹಾಗೆ ಹುಟ್ಟುವ ಮರಿಗಳು ಗುಂಪು ಗುಂಪಾಗಿ ತಂದೆಯ ಚೀಲದಿಂದ ಹೊರಬಂದು ತಮ್ಮ ದಾರಿ ಹಿಡಿಯುತ್ತವೆ.




ಈ ಪರಮ ವಿಚಿತ್ರ ಅಲ್ಪ ಗಾತ್ರದ ಮತ್ಸ್ಯಗಳಿಗೆ ಮನುಷ್ಯರಿಂದ ಭಾರೀ ಬೇಡಿಕೆ ಇದೆ. ಕಡಲ ಕುದುರೆಗಳ ಕಾಲ್ಪನಿಕ ಔಷಧೀಯ ಗುಣಗಳು ಈ ಜೀವಿಗಳನ್ನು ಸಂಕಷ್ಟಕ್ಕೆ ಸಿಲುಕಿಸಿವೆ. ಅಂಥ ಮೂಢನಂಬಿಕೆಗಳಿಗಾಗಿ ಪ್ರತಿ ವರ್ಷ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಇವನ್ನು ಹಿಡಿದು, ಒಣಗಿಸಿ ಮಾರುವ ವ್ಯಾಪಾರ ಭಾರೀ ಲಾಭದಾಯಕವಾಗಿದೆ. ಅದರ ಪರಿಣಾಮವಾಗಿ ಕಡಲ ಕುದುರೆಗಳ ಎಲ್ಲ ಪ್ರಭೇದಗಳೂ ಅಳಿದು ಹೋಗುವ ಅಪಾಯದಲ್ಲಿವೆ.

■ ಎನ್. ವಾಸುದೇವ್